# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 527 |
| ಸದಸ್ಯರ ಹೆಸರು | ಶ್ರೀಮತಿ ಉಮಾಶ್ರೀ (ನಾಮ ನಿರ್ದೇಶನ ಹೊಂದಿರುವರು) |
| ಉತ್ತರಿಸುವ ದಿನಾಂಕ | 19-07-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಒಟ್ಟು ಆಹಾರ ಧಾನ್ಯಗಳನ್ನು ಬೆಳೆಯುತ್ತಿರುವ ಕೃಷಿ ಪ್ರದೇಶದ ಪ್ರಮಾಣವೆಷ್ಟು; ಕಳೆದ ಐದು ವರ್ಷಗಳಲ್ಲಿ ಕೃಷಿ ಪ್ರದೇಶದ ಪ್ರಮಾಣದಲ್ಲಿ ಆದ ಬದಲಾವಣೆಗಳೇನು: (ಜಿಲ್ಲಾವಾರು ಮಾಹಿತಿ ನೀಡುವುದು) | 2023-24 ನೇ ಮೂರನೇ ಮುಂಗಡ ಅಂದಾಜು ವರದಿಯನ್ವಯ ರಾಜ್ಯದಲ್ಲಿ ಒಟ್ಟು ಆಹಾರ ಧಾನ್ಯಗಳನ್ನು 75.64 ಲಕ್ಷ ಹೆಕ್ಟೇರ್ ಕೃಷಿ ಪ್ರದೇಶದಲ್ಲಿ ಬೆಳೆಯಲಾಗಿದೆ.<br>ಕಳೆದ ಐದು ವರ್ಷಗಳಲ್ಲಿ 2018-19 ರಿಂದ 2022-23 ರವರೆಗೆ ಕೃಷಿ ಪ್ರದೇಶದ ಪ್ರಮಾಣವು ಶೇ.2.41ರಷ್ಟು ಇಳಿಕೆಯಾಗಿರುವುದು ಕಂಡುಬಂದಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ) | ಇತ್ತೀಚಿಗೆ ರಾಜ್ಯದಲ್ಲಿ ಭತ್ತ, ಜೋಳ ಹಾಗೂ ತೊಗರಿಯಂತಹ ಬೆಳೆಗಳನ್ನು ಬೆಳೆಯುವ ಪ್ರದೇಶದ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕಾರಣಗಳಿಂದಾಗಿ ಇಳಿಕೆಯಾಗುತ್ತಿದೆ; ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ರಾಜ್ಯದಲ್ಲಿ ಜೋಳ ಮತ್ತು ತೊಗರಿ ಬೆಳೆಗಳ ಪ್ರದೇಶದಲ್ಲಿ ಇಳಿಕೆ ಕಂಡು ಬಂದಿರುತ್ತದೆ. ಹಾಗೂ ಭತ್ತ ಬೆಳೆ ಪ್ರದೇಶದಲ್ಲಿ ಏರಿಕೆ ಕಂಡು ಬಂದಿರುತ್ತದೆ. 2018-19 ರಿಂದ 2022-23 ರ ವರೆಗೆ ಸದರಿ ಬೆಳೆಗಳ ವಿಸ್ತೀರ್ಣದ ಮಾಹಿತಿ ಈ ಕೆಳಗಿನಂತಿದೆ.<br>(ವಿಸ್ತೀರ್ಣ ಲಕ್ಷ ಹೆಕ್ಟೇರ್ ಗಳಲ್ಲಿ) |

| **ವರ್ಷ /ಬೆಳೆ** | **ಭತ್ತ** | **ಜೋಳ** | **ತೊಗರಿ** |
|---|---|---|---|
| 2018-19 | 12.00 | 9.94 | 15.60 |
| 2019-20 | 12.48 | 9.14 | 16.26 |
| 2020-21 | 15.14 | 7.65 | 16.64 |
| 2021-22 | 14.87 | 6.28 | 17.53 |
| 2022-23 | 13.55 | 5.67 | 12.44 |
| **ಏರಿಕೆ/ಇಳಿಕೆ ಶೇ.** | **+13%** | **-43%** | **-20%** |

ಕೃಷಿ ಬೆಳೆಗಳ ಬಿತ್ತನೆಯು ಹಂಗಾಮುವಾರು ಮಳೆ ಹಾಗೂ ಹವಾಮಾನ ಪರಿಸ್ಥಿತಿಯ ಮೇಲೆ ಅವಲಂಬಿತವಾಗಿರುತ್ತದೆ. ಸಾಮಾನ್ಯವಾಗಿ ರೈತರು ಹೆಚ್ಚು ಲಾಭದಾಯಕ ಬೆಳೆಗಳನ್ನು ಬೆಳೆಯಲು ಇಚ್ಛಿಸುತ್ತಾರೆ.

| | | |
|---|---|---|
| | | ಪ್ರಸ್ತುತ ಜೋಳ ಮತ್ತು ತೊಗರಿ ಬೆಳೆಗಳ ಪ್ರದೇಶವು ಮುಸಕಿನಜೋಳ, ಹತ್ತಿ ಮತ್ತು ಸೋಯಾಬಿನ್ ಬೆಳೆಗಳಿಗೆ ಸ್ಥಳಾಂತರಗೊಂಡಿರುವುದರಿಂದ ಸದರಿ ಬೆಳೆಗಳ ಪ್ರದೇಶವು ಇಳಿಕೆಯಾಗಿದೆ.<br><br>ಸರ್ಕಾರ ಕೈಗೊಂಡಿರುವ ಕ್ರಮ: ಕೇಂದ್ರ ಪುರಸ್ಕೃತ ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆಯಡಿ ಭತ್ತ, ಜೋಳ ಮತ್ತು ತೊಗರಿ ಬೆಳೆಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಆಹಾರ ಮತ್ತು ಪೌಷ್ಟಿಕ ಭದ್ರತೆ ಯೋಜನೆ (FNS)- ಅಕ್ಕಿ, ದ್ವಿದಳಧಾನ್ಯ, ನ್ಯೂಟ್ರಿಸಿರಿಧಾನ್ಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br><br>ಸದರಿ ಕಾರ್ಯಕ್ರಮದಡಿ ನೂತನ ತಳಿಗಳ ಬಳಕೆಯಿಂದ ಸುಧಾರಿತ ಪದ್ಧತಿ ಪ್ರಾತ್ಯಕ್ಷಿಕೆ, ಧೃಡೀಕೃತ ಬಿತ್ತನೆ ಬೀಜಗಳ ವಿತರಣೆ, ಸಮಗ್ರ ಪೋಷಕಾಂಶಗಳು, ಪೀಡೆನಾಶಕಗಳು, ಸುಧಾರಿತ ಯಂತ್ರೋಪಕರಣಗಳು, ಹಸಿರೆಲೆ ಗೊಬ್ಬರ ಬೀಜಗಳ ವಿತರಣೆಯನ್ನು ಶೇ 50ರ ಸಹಾಯಧನದಲ್ಲಿ ರೈತರಿಗೆ ನೀಡಲಾಗುತ್ತಿದೆ.<br><br>ಮುಂದುವರೆದು, ಪ್ರಸ್ತಕ ಸಾಲಿನಲ್ಲಿ ತೊಗರಿ ಬೆಳೆಯಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆ ಹೆಚ್ಚಿಸಲು ರಾಜ್ಯಾದ್ಯಾಂತ ತೊಗರಿಯನ್ನು ಮುಖ್ಯ ಬೆಳೆಯಾಗಿ ಹಾಗೂ ಇತರೆ ಬೆಳೆಗಳಲ್ಲಿ ಅಂತರ ಬೆಳೆಯಾಗಿ ಬೆಳೆಯಲು ವ್ಯಾಪಕ ಪ್ರಚಾರ ನೀಡಲಾಗುತ್ತಿದೆ |
| ಇ) | ರಾಜ್ಯದಲ್ಲಿ ಆಹಾರ ಧಾನ್ಯಗಳನ್ನು ಬೆಳೆಯುತ್ತಿರುವ ಕೃಷಿ ಪ್ರದೇಶಗಳನ್ನು ಅಡಿಕೆಯಂತಹ ವಾಣಿಜ್ಯ ಬೆಳೆಗಳು ಹಾಗೂ ಇತರೆ ಉದ್ದೇಶಗಳಿಗೆ ಪರಿವರ್ತನೆಯಾಗುತ್ತಿರುವುದರಿಂದ, ಆಹಾರ ಧಾನ್ಯ ಬೆಳೆ ಪ್ರದೇಶದ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದಲ್ಲಿ ಕಳೆದ ಐದು ವರ್ಷದಲ್ಲಿ ಶೇ 2.41 ರಷ್ಟು ಆಹಾರ ಧಾನ್ಯಗಳ ಪ್ರದೇಶದಲ್ಲಿ ಇಳಿಕೆ ಕಂಡು ಬಂದಿರುತ್ತದೆ. ಆಹಾರ ಧಾನ್ಯಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಇಲಾಖೆಯ ಕಾರ್ಯಕ್ರಮಗಳಾದ ಸಿರಿಧಾನ್ಯ ಉತ್ತೇಜನೆ ,"ರೈತ ಸಿರಿ" ಹಾಗೂ ಆಹಾರ ಮತ್ತು ಪೌಷ್ಟಿಕ ಭದ್ರತಾ ಯೋಜನೆ (NFSM) ಅಡಿ ರೈತರಿಗೆ ಆಹಾರ ಧಾನ್ಯಗಳನ್ನು ಬೆಳೆಸಲು ಉತ್ತೇಜಿಸಲಾಗುತ್ತಿದೆ. |

ಸಂಖ್ಯೆ: AGRI/147/ACT/2024

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು

# ಅನುಬಂಧ (ಎಲ್ ಸಿ ಕ್ಯೂ-527)

## 2018-19 ರಿಂದ 2022-23 ರವರೆಗೆ ಜಿಲ್ಲಾವಾರು ಆಹಾರ ಧಾನ್ಯಗಳ ವಿಸ್ತೀರ್ಣ

(ವಿಸ್ತೀರ್ಣ ಹೆಕ್ಟೇರ್ ಗಳಲ್ಲಿ)

| ಕ್ರ.ಸಂ | ಜಿಲ್ಲೆಗಳ ಹೆಸರು | 2018-19 | 2019-20 | 2020-21 | 2021-22 | 2022-23 | % Variations B/w 2018-19 & 2022-23 |
|---|---|---|---|---|---|---|---|
| 1 | ಬಾಗಲಕೋಟೆ | 403371 | 376713 | 343026 | 346690 | 277747 | -31.14 |
| 2 | ಬೆಂಗಳೂರು-ನಗರ | 14912 | 27581 | 21974 | 21857 | 18243 | 22.34 |
| 3 | ಬೆಂಗಳೂರು-ಗ್ರಾಮೀಣ | 57190 | 60548 | 73386 | 77253 | 70888 | 23.95 |
| 4 | ಬೆಳಗಾವಿ | 584634 | 634119 | 726439 | 663604 | 591151 | 1.11 |
| 5 | ಬಳ್ಳಾರಿ | 445094 | 451932 | 482715 | 512370 | 223848 | -49.71 |
| 6 | ಬಿದರ್ | 216697 | 283004 | 330637 | 324777 | 274971 | 26.89 |
| 7 | ವಿಜಯಪುರ | 1047454 | 875854 | 798160 | 732976 | 649085 | -38.03 |
| 8 | ಚಾಮರಾಜನಗರ | 101156 | 122254 | 99452 | 109104 | 95930 | -5.17 |
| 9 | ಚಿಕ್ಕಬಳ್ಳಾಪುರ | 92888 | 112008 | 118938 | 116140 | 100230 | 7.90 |
| 10 | ಚಿಕ್ಕಮಗಳೂರು | 111703 | 82348 | 107573 | 96742 | 93474 | -16.32 |
| 11 | ಚಿತ್ರದುರ್ಗ | 189955 | 232957 | 231971 | 245883 | 263321 | 38.62 |
| 12 | ದಕ್ಷಿಣ ಕನ್ನಡ | 9529 | 12678 | 8304 | 7402 | 7330 | -23.08 |
| 13 | ದಾವಣಗೆರೆ | 279808 | 264304 | 297237 | 292741 | 285406 | 2.00 |
| 14 | ದಾರವಾಡ | 287062 | 267592 | 324511 | 348405 | 377792 | 31.61 |
| 15 | ಗದಗ | 398060 | 389641 | 426857 | 391934 | 465723 | 17.00 |
| 16 | ಕಲಬುರಗಿ | 948044 | 934074 | 860251 | 788834 | 679377 | -28.34 |
| 17 | ಹಾಸನ | 247404 | 257180 | 262768 | 277452 | 294549 | 19.06 |
| 18 | ಹಾವೇರಿ | 295401 | 331849 | 384130 | 404220 | 438731 | 48.52 |
| 19 | ಕೊಡಗು | 21381 | 29744 | 22224 | 22454 | 15517 | -27.43 |
| 20 | ಕೊಲಾರ | 67850 | 82558 | 89427 | 77828 | 60857 | -10.31 |
| 21 | ಕೊಪ್ಪಳ | 384699 | 449903 | 451847 | 462617 | 491780 | 27.84 |
| 22 | ಮಂಡ್ಯ | 167201 | 153204 | 171823 | 168146 | 180918 | 8.20 |
| 23 | ಮೈಸೂರು | 278061 | 274412 | 320207 | 348865 | 342725 | 23.26 |
| 24 | ರಾಯಚೂರು | 636114 | 604832 | 638477 | 598159 | 492580 | -22.56 |
| 25 | ರಾಮನಗರ | 68569 | 80299 | 88089 | 91830 | 75434 | 10.01 |
| 26 | ಶಿವಮೊಗ್ಗ | 163009 | 155959 | 160462 | 142996 | 138271 | -15.18 |
| 27 | ತುಮಕೂರು | 214453 | 222111 | 252805 | 259867 | 252713 | 17.84 |
| 28 | ಉಡುಪಿ | 37450 | 41225 | 43947 | 46462 | 44080 | 17.70 |
| 29 | ಉತ್ತರ ಕನ್ನಡ | 65614 | 63863 | 65109 | 59993 | 53758 | -18.07 |
| 30 | ವಿಜಯನಗರ* | | | | | 330853 | 0.00 |
| 31 | ಯಾದಗಿರ್ | 264344 | 288054 | 290155 | 295919 | 216953 | -17.93 |
| | ರಾಜ್ಯದ ಒಟ್ಟು | 8099107 | 8162800 | 8492900.71 | 8333520 | 7904235 | -2.41 |

*ವಿಜಯನಗರ ಜಿಲ್ಲೆಯು 2018 ರಿಂದ 2021ರ ವರೆಗೆ ಬಳ್ಳಾರಿಜಿಲ್ಲೆಗೆ ಸೇರಿರುತ್ತದೆ.